ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 650 (176)

ಶ್ರೀ ಯುಬಿ.ಬಣಕಾರ್:- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕ್ ತುಮ್ಮಿನಕಟ್ಟೆ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33: 11 ಕೆ.ವಿ.ಸಬ್ ಸ್ಟೇಷನ್ ಕೆಲಸ ಕುಂಠಿತವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಎಂದು ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಶರಣಪ್ಪ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು):-

ಅ) ಬಂದಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಭೂ ಮಾಲೀಕರ ನಡುವೆ ಉಂಟಾದ ವಿವಾದದಿಂದಾಗಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಆ) ಕರ್ನಾಟಕ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಅವಾರ್ಡ್ ಪ್ರಕಾರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಮಾಲೀಕರ ನಡುವೆ ಉಂಟಾಗಿದ್ದ ಭೂ ವಿವಾದವನ್ನು ಪರಸ್ಪರ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ರೆವಿನ್ಯೂ ಇಲಾಖೆಯನ್ನು ಪರಿಷ್ಕೃತ ಆದೇಶ ನೀಡುವ ಬಗ್ಗೆ ಒತ್ತಾಯಿಸುತ್ತಿದೆ. ರೆವಿನ್ಯೂ ಇಲಾಖೆಯಿಂದ ಒಪ್ಪಿಗೆ ದೊರೆತ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ವಿಷಯ:- ಅನುಕಂಪ ಆಧಾರದ ಮೇಲೆ ನೌಕರಿ ನೀಡುವ ನಿಯಮಾವಳಿಗೆಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 651 (1135)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಕರಡು ನಿಯಮಾವಳಿಗಳನ್ನು ರಚಿಸಬೇಕಾಗಿರುವುದು ನಿಜವೇ?

ಆ) ನಿಯಮಾವಳಿಗಳನ್ನು ರಚಿಸುವುದರಲ್ಲಿ ವಿಳಂಬವಾಗುತ್ತಿರುವುದರಿಂದ ಈ ಯೋಜನೆಯ ಅಡಿಯಲ್ಲಿ ಅರ್ಜಿ ಹಾಕಿಕೊಂಡಿರುವರಿಗೆ ತೊಂದರೆ ಆಗುತ್ತಿರುವುದು ಸಕಾರರದವರ ಗಮನಕ್ಕೆ ಬಂದಿದೆಯೇ?

ಇ) ಈ ನಿಯಮಾವಳಿಗಳನ್ನು ಯಾವಾಗ ಪ್ರಕಟಿಸಲಾಗುವುದು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):-

ಅ) ಕರಡು ನಿಯಮಾವಳಿಯನ್ನು ಈಗಾಗಲೇ ರೂಪಿಸಿ ದಿನಾಂಕ 23-3-96 ರಂದು ಪ್ರಕಟಿಸಲಾಗಿದೆ.

ಆ) ಉದ್ಭವಿಸುವುದಿಲ್ಲ. ಏಕೆಂದರೆ ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಪರಿಗಣಿಸಲು ಕರಡು ನಿಯಮಗಳಲ್ಲಿ ಸೂಕ್ತ ಅವಕಾಶವನ್ನು ಪ್ರಸ್ತಾಪಿಸಲಾಗಿದೆ.

ಇ) ಶೀಘ್ರದಲ್ಲಿಯೇ.

ವಿಷಯ:- ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ನೀರು ಸರಬರಾಜಾಗದಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 685 (1198)

ಶ್ರೀ ಪಿ.ಎನ್.ಪ್ರಕಾಶ್:- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ನೀರಿನ ಪೈಪುಗಳು ತುಂಬ ಹಳೆಯದಾಗಿದ್ದು ಸರಿಯಾಗಿ ನೀರು ಸರಬರಾಜು ಆಗದೇ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾನಿವೃದ್ಧಿ ರಾಜ್ಯ ಸಚಿವರು):-

ಅ) ಹೌದು.

ಆ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ 3 ಅಂಗುಲ ವ್ಯಾಸದ ತುಂಬಾ ಹಳೆಯದಾದ ನೀರಿನ ಪೈಪುಗಳನ್ನು ತೆಗೆದು 4 ಅಂಗುಲ ವ್ಯಾಸದ ಹೊಸ ನೀರಿನ ಪೈಪುಗಳನ್ನು ಅಳವಡಿಸಲು 16.23ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಹಣದ ಕೊರತೆಯಿಂದ ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ. 1996-97 ಸಾಲಿನ ಅಯವ್ಯಯದಲ್ಲಿ ತುಕ್ಕು ಹಿಡಿದ ಕೊಳವೆಗಳನ್ನು ಬದಲಾಯಿಸುವ ಯೋಜನೆಯಡಿಯಲ್ಲಿ ರೂ. 100.00 ಲಕ್ಷಗಳ ಪ್ರಾವಿಜನ್ ಮಾಡಲಾಗಿದೆ. ಈ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ವಿಷಯ:- ರಾಜಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಕೆಲವು ಬಡಾವಣೆಗಳಲ್ಲಿರುವವರಿಗೆ ಹಕ್ಕು ಪತ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 705 (715)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ):- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ರಾಜಾಜಿನಗರ